# ಗಣಿತ ತಜ್ಞ ಅರುಣ ಕುಲಕರ್ಣಿಗೆ ಸನ್ಮಾನ



**ಗದಗ:** ಸಭಾಪತಿ ಬಸವರಾಜ ಹೊರಟ್ಟಿಯವರು ನೀಡಿರುವ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿಭಾಯಿಸುವುದರ ಜೊತೆಗೆ ಅವರ ಆಶಯಗಳನ್ನು ಸಮಾಜಕ್ಕೆ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ತಲುಪಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ನಿವೃತ್ತ ಮುಖ್ಯೋಪಾಧ್ಯಾಯ, ಗಣಿತ ತಜ್ಞ ಅರುಣ ಕುಲಕರ್ಣಿ ಹೇಳಿದರು.

ಅವರು ಬಸವರಾಜ ಹೊರಟ್ಟಿ ದಂಪತಿ ಗದುಗಿನ ಸಿದ್ಧಲಿಂಗ ನಗರದ ಸರ್ಕಾರಿ ಪ್ರೌಢಶಾಲೆಯನ್ನು ದತ್ತುಪಡೆದು ಅಲ್ಲಿ ನಿರ್ಮಿಸುತ್ತಿರುವ ಹೇಮಲತಾ ಬಸವರಾಜ ಹೊರಟ್ಟಿ ಗಣಿತ ಪ್ರಯೋಗಾಲಯ ಹಾಗೂ ಸಂಶೋಧನಾ ಕೇಂದ್ರದ ಮಾರ್ಗದರ್ಶಕರಾಗಿ ನೇಮಕಗೊಂಡ ನಿಮಿತ್ತ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಅವ್ವ ಸೇವಾ ಟ್ರಸ್ಟ ಸಂಚಾಲಕರಾದ ಡಾ.ಬಸವರಾಜ ಧಾರವಾಡ ಮಾತನಾಡಿ, ಅರುಣ ಕುಲಕರ್ಣಿ ಅವರು ನಾಲ್ಕು ದಶಕಗಳ ಕಾಲ ಶಿಕ್ಷಕರಾಗಿ ಮುಖ್ಯೋಪಾದ್ಯಾಯರಾಗಿ ವಿಶೇಷವಾಗಿ ಗಣಿತ ತಜ್ಞರಾಗಿ ತಮ್ಮದೇ ಆದ ಹೆಗ್ಗುರುತುಗಳನ್ನು ಮೂಡಿಸಿದ್ದಾರೆ ಎಂದು ಹೇಳಿದರು.

ಎಂ.ಎ.ರಡ್ಡೇರ, ಸರಸ್ವತಿ ಕನವಳ್ಳಿ, ಆರ್.ಎಸ್.ಬುರಡಿ, ವಿದ್ಯಾ ಗಡಗಿ, ಪಾರ್ವತಿ ವಸ್ತ್ರದ ಮತ್ತಿತರರಿದ್ದರು.

# ಬಸವರಾಜ ಹೊರಟ್ಟಿ ನೀಡಿದ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿಭಾಯಿಸುವೆ



ಗದಗ, ಸೆ. 3. ಸಭಾಪತಿ ಬಸವರಾಜ ಹೊರಟ್ಟಿಯವರು ನೀಡಿರುವ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿಭಾಯಿಸುವುದರ ಜೊತೆಗೆ ಅವರ ಆಶಯಗಳನ್ನು ಸಮಾಜಕ್ಕೆ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ತಲುಪಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ನಿವೃತ್ತ ಮುಖ್ಯೋಪಾಧ್ಯಾಯ ಗಣಿತ ತಜ್ಞ ಅರುಣ ಕುಲಕರ್ಣಿ ಹೇಳಿದರು.

ಅವರು ಬಸವರಾಜ ಹೊರಟ್ಟಿ ದಂಪತಿಗಳು ಗದುಗಿನ ಸಿದ್ಧಲಿಂಗ ನಗರದ ಸರಕಾರಿ ಪ್ರೌಢಶಾಲೆಯನ್ನು ದತ್ತುಪಡೆದು ಅಲ್ಲಿ ನಿರ್ಮಿಸುತ್ತಿರುವ ಶ್ರೀಮತಿ ಹೇಮಲತಾ ಬಸವರಾಜ ಹೊರಟ್ಟಿ ಗಣಿತ ಪ್ರಯೋಗಾಲಯ ಹಾಗೂ ಸಂಶೋಧನಾ ಕೇಂದ್ರದ ಮಾರ್ಗದರ್ಶಕರಾಗಿ ನೇಮಕಗೊಂಡ ನಿಮಿತ್ಯ ಅವ್ವ ಸೇವಾ ಟ್ರಸ್ಟ ಹಾಗೂ ಸರಕಾರಿ ಪ್ರೌಢಶಾಲೆ ಸಿದ್ಧಲಿಂಗ ನಗರದ ಶಿಕ್ಷಕ ಬಳಗದ ವತಿಯಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಗಣಿತ ಪ್ರಯೋಗಾಲಯದ ಲಾಭವನ್ನು ಜಿಲ್ಲೆಯ ಪ್ರತಿಯೊಬ್ಬ ವಿದ್ಯಾರ್ಥಿಗಳಿಗೆ ಕಲ್ಪಿಸುವ ಮೂಲಕ ಸರಳ ಗಣಿತ ಕಲಿಕೆಗೆ ಹಾದಿಯನ್ನು ಕಂಡುಕೊಳ್ಳುವುದಾಗಿ ಹೇಳಿದರು, ನನ್ನ ನಾಲ್ಕು ದಶಕಗಳ ಅನುಭವವನ್ನು ಈ ಪ್ರಯೋಗಾಲಯದ ಮೂಲಕ ಶಿಕ್ಷಣ ಕ್ಷೇತ್ರಕ್ಕೆ ಅರ್ಪಿಸುವುದಾಗಿ ಹೇಳಿ ಬಸವರಾಜ ಹೊರಟ್ಟಿಯವರು ನನ್ನ ಮೇಲೆ ನಂಬುಗೆ ಇಟ್ಟು ಮಹತ್ವದ ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಹೋಗಲು ಅವಕಾಶ ಕಲ್ಪಿಸಿದ್ದಾರೆ. ಅವರ ಪ್ರೀತಿ ವಿಶ್ವಾಸಕ್ಕೆ ಚಿರಋಣಿಯಾಗಿ ಇರುವುದಾಗಿ ಹೇಳಿದರು.

ಅವ್ವ ಸೇವಾ ಟ್ರಸ್ಟ ಸಂಚಾಲಕರಾದ ಡಾ.ಬಸವರಾಜ ಧಾರವಾಡ ಮಾತನಾಡಿ, ಅರುಣ ಕುಲಕರ್ಣಿ ಅವರು ನಾಲ್ಕು ದಶಕಗಳ ಕಾಲ ಶಿಕ್ಷಕರಾಗಿ ಮುಖ್ಯೋಪಾಧ್ಯಾಯರಾಗಿ ವಿಶೇಷವಾಗಿ ಗಣಿತ ತಜ್ಞರಾಗಿ ತಮ್ಮದೇ ಆದ ಹೆಗ್ಗುರುತುಗಳನ್ನು ಮೂಡಿಸಿದ್ದಾರೆ. ಈ ಪ್ರಯೋಗಾಲಯವನ್ನು ರಾಜ್ಯದಲ್ಲಿಯೇ ಒಂದು ಮಾದರಿ ಪ್ರಯೋಗಾಲಯವನ್ನಾಗಿ ಮಾಡಲಿ. ಈ ಪ್ರಯೋಗಾಗಲಯ ಜಿಲ್ಲೆಯ ವಿದ್ಯಾರ್ಥಿಗಳ ಆಸ್ತಿ ಇದರ ಲಾಭ ಪ್ರತಿಯೊಬ್ಬ ವಿದ್ಯಾರ್ಥಿಗೂ ದೊರೆಯುವಂತಾಗಲಿ ಎಂದು ಹೇಳಿ ಅರುಣ ಕುಲಕರ್ಣಿಯವರಿಗೆ ಶುಭ ಕೋರಿದರು.

ಡಿಡಿಪಿಐ ಎಂ.ಎ.ರಡ್ಡೇರ, ಸರಸ್ವತಿ ಡಿ. ಕನವಳ್ಳಿ ಶಿಕ್ಷಣಾಧಿಕಾರಿಗಳು, ಅಕ್ಷರದಾಸೋಹ ಜಿಲ್ಲಾ ಪಂಚಾಯತ, ಗದಗ ಆರ್.ಎಸ್. ಬುರಡಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಗದಗ ಶಹರ, ನಗರಸಭೆ ಸದಸ್ಯೆ ವಿದ್ಯಾ ಗಡಗಿ ಸದಸ್ಯರು ಗದಗ ಬೆಟಗೇರಿ ನಗರಸಭೆ. ಮುಖ್ಯೋಪಾಧ್ಯಾಯ ಪಾರ್ವತಿ ವಸ್ತ್ರದ, ಜಯಲಕ್ಷ್ಮೀ ಬಿ. ಅಣ್ಣಿಗೇರಿ, ಶ್ರೀಮತಿ ಎಸ್.ಆರ್.ಹನಮಗೌಡ್ರ, ಶ್ರೀಮತಿ ಎಸ್.ಜಿ.ಕುಲಗುಡಿ, ಎಮ್.ಆಯ್. ಶಿವನಗೌಡ್ರ, ಶ್ರೀಮತಿ ಎಂ.ಪಿ.ಸಾಂಬ್ರಾಣಿ, ಶ್ರೀಮತಿ ಎಸ್.ಬಿ.ಗುಳೇದವರ, ಶ್ರೀಮತಿ ಎಸ್.ಎಂ.ಪತ್ತಾರ, ಶ್ರೀಮತಿ ಎಸ್.ಎಸ್.ಗಾಳಿ, ಆರ್.ವಾಯ್. ಬಸರಿ, ಶ್ರೀಮತಿ ಎಸ್.ಎ.ಬಾಣದ, ಶ್ರೀಮತಿ ಎಸ್.ಎ.ಗದ್ದಿಕೇರಿ, ಎಸ್. ಆರ್.ಶಿರೋಳ, ಶ್ರೀಮತಿ ಎಸ್.ಯು. ಕುಪ್ಪಿ, ಶ್ರೀಮತಿ ಜಿ.ಎಸ್.ಆಲವಂಡಿ, ಶ್ರೀಮತಿ ಪಿ.ವ್ಹಿ.ದಾಸರ, ಪ್ರ.ದ.ಸ. ಶ್ರೀಮತಿ ಎಲ್.ಎಸ್.ಮಾಳೊತ್ತರ ಮುಂತಾದವರು ಉಪಸ್ಥಿತರಿದ್ದರು.